**Witness called and oath is administered on 5-1-2021 Further examination in chief by Smt. VNG advocate for plaintiff:-**

Today, I have filed my Affidavit evidence as my chief examination. The contents of the said Affidavit is true and correct to the best of my knowledge as they are drafted as per my instruction. It bears my signature.

In support of my contention, I have produced the following documents:-

Ex.P.1 is the certified copy of sale deed dt. 16-2-1995 executed with respect to Survey No.233.

Ex.P.2 is the certified copy of the sale deed dt. 16-2-1995 executed with respect to Survey No. 232.

Ex.P.3 is the copy of Legal notice dated 2-9-2014.

Ex.P.4 is the Reply notice dt. 26-9-2014.

Ex.P.5 is the certified copy of the Gift deed dated 23-9-2014.

Ex.P.6 is the copy of letter written to post office.

Ex.P.7 and Ex.P.8 are the reply letter issued by post office.

**Time sought to lead further chief. Hence, deferred.**

**(Typed to my dictation in the open court)**

**ROI & AC.,**

**(Jaishankar)**
**XV ACC&S Judge,**
**Bengaluru.**

**Witness recalled and oath is administered on 24-2-2021**

**Further examination in chief by Sri. CPP advocate for plaintiff:-**

**I have produced the following documents:-**

Ex.P.9 to Ex.P.28 are the RTC extracts of Survey No. 232.

Ex.P.29 to Ex.P.48 are the RTC extracts of Survey No.233.

Ex.P.49 is the Mutation register extract bearing no. IHC 16/1994-95.

Ex.P.50 is the certified copy of Mutation register extract bearing no. 112/2004-05.

Ex.P.51 is the certified copy of the Mutation register extract bearing MR.No. T7/13-14.

**Further chief is deferred at request.**

**(Typed to my dictation in the open court)**

**ROI & AC.,**

**(Jaishankar)**
**XV ACC&S Judge,**
**Bengaluru.**

<u>ದಿನಾಂಕ 04.12.2021 ರಂದು ಸಾಕ್ಷಿ ಹಾಜರಿದ್ದು ಪ್ರಮಾಣಿಕರಿಸಲಾಯಿತು.</u>

<u>ಮಧ್ಯಂತರ ಅರ್ಜಿಯಲ್ಲಿ ಆದ ಅದೇಶ ಪ್ರಕಾರ ಪ್ರತಿವಾದಿ 1 ರಿಂದ 3 ರವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.</u>

<u>ಪಾಟೀ ಸವಾಲುಃ- ಪ್ರತಿವಾದಿ 1 ರಿಂದ 3 ರವರ ಪರ ಶ್ರೀ.ಎಸ್.ಎನ್ ವಕೀಲರಿಂದ :-</u>

ನನ್ನ ಗಂಡ ಈ ದಿವಸ ನ್ಯಾಯಾಲಯಕ್ಕೆ ಬಂದಿರುತ್ತಾರೆ. ನಾನು ದ್ವಿತೀಯ ಪಿಯುಸಿ ವರೆಗೆ ಓದಿರುತ್ತೇನೆ. ನಮ್ಮ ತಂದೆ ಅಶ್ವತ್ಥನಾರಾಯಣ ಮತ್ತು ಅಜ್ಜಿ ಮುನಿಯಮ್ಮ ಮೂಚಿಯಲ್ ಆಗಿ ದಿನಾಂಕ 05.12.1986 ರಂದು ಮರುಣ ಶಾಸನ ಮಾಡಿದ್ದು ಅರದಲ್ಲಿ ಯಾರು ಜೀವಿತ ಇರುತ್ತಾರೋ ಅವರಿಗೆ ಮಾತ್ರ ಆಸ್ತಿ ಹೋಗತಕ್ಕದ್ದು ಎಂದು ಬರೆದಿದ್ದರಿಂದ ಆ ವಿಷಯ ನನಗೆ ಗೊತ್ತಿದ್ದು ಆ ಪ್ರಕಾರ ನನ್ನ ವಾದ ಪತ್ರದ 7 ನೇ ಅಂಕಣದಲ್ಲಿ ನಮ್ಮ ತಂದೆ ನಮ್ಮ ಅಜ್ಜಿ ಮುನಿಯಮ್ಮಗಿಂತ ಮೊದಲೇ ತೀರಿಕೊಂಡಿರುತ್ತಾರೆಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬದಲ್ಲಿ ನಮ್ಮ ತಂದೆಯಾಗಲಿ, ಅಜ್ಜಿಯಾಗಲಿ ಅಥವಾ ಯಾರೇ ಸದಸ್ಯರಾಗಲಿ ನನಗೆ ಪ್ರಾಮುಖ್ಯತೆ ನೀಡಿದ್ದು, ಆ ಪ್ರಕಾರ ನನಗೆ ತಿಳಿಸದೇ ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸುಳ್ಳು. ನಮ್ಮ ತಂದೆ ಸತ್ತ ನಂತರ ಕೂಡಲೇ ನಾನು ಪಾಲು ಕೇಳಿರುವುದಿಲ್ಲ. ನಾನು ನನ್ನ ವಾದ ಪತ್ರದ ಪ್ಯಾರಾ ಅಂಕಣದಲ್ಲಿ ಈಗ ಓದಿ ಹೇಳಲಾದ ರೀತಿಯಲ್ಲಿ ಬರೆದಿರುತ್ತೇನೆ ಎಂದರೆ ಸಾಕ್ಷಿಯು ನಾನು ಪಾಲು ಕೇಳಿದ್ದು ನಿಜ ಆದರೆ ನಮ್ಮ ತಂದೆ ಸತ್ತ ನಂತರ ಪಾಲು ಕೇಳಿರುತ್ತೇನೆ. ವಾದ ಪತ್ರದ 7 ನೇ ಅಂಕಣದಲ್ಲಿ ಬರೆದ ವಿಷಯ ನಿಜ ಇರುತ್ತದೆ.

ನಾನು ನಮ್ಮ ತಾಯಿಯನ್ನು 2013 ರ ಡಿಸೆಂಬರ್ ತಿಂಗಳ 3 ನೇ ವಾರದಲ್ಲಿ ಪಾಲು ಕೊಡುವಂತೆ ಕೇಳಿರುತ್ತೇನೆ. ಅದಕ್ಕಿಂತ ಮೊದಲು ಕೇಳಿದ್ದೆ ಅದಕ್ಕೆ ಅವರು ನನ್ನ ಮದುವೆಯಾಗಲಿ ಕೊಡುತ್ತೇನೆ ಎಂದು ಹೇಳಿದ್ದರು. ಅ ರೀತಿ ಯಾವಾಗ ಕೇಳಿದೆ ಎಂದು ಹೇಳಲು ಬರುವುದಿಲ್ಲ. ಪ್ರತಿವಾದಿ 2 ಮತ್ತು 3 ರವರನ್ನು ಕೇಳಿದಾಗ ಅವರು 1 ನೇ ಪ್ರತಿವಾದಿಯನ್ನು ಕೇಳುವಂತೆ ಹೇಳಿದ್ದರು.

ನನ್ನ ಮದುವೆಯಾದ ಮೇಲೆ ಸ್ವಲ್ಪ ದಿವಸ ಬಿಟ್ಟು ಪಾಲು ಕೊಡುವಂತೆ ಕೇಳಿದ್ದೆ. ನನ್ನ ಮದುವೆಯಾದಾಗ ನನ್ನ ವಯಸ್ಸು 17 ಇತ್ತು. 1988 ರಲ್ಲಿ ನನ್ನ ಮದುವೆಯಾಗಿದೆ. ಸಾಕ್ಷಿಯೂ ಪುನಃ ನಾನು ನನ್ನ ಮದುವೆಯಾದ ನಂತರ ಪಾಲು ಕೊಡುತ್ತೇನೆ ಎಂದು ಹೇಳಿರುವುದಿಲ್ಲ. ನಮ್ಮ ಅಣ್ಣ ತಮ್ಮಂದಿರ ಮದುವೆಯಾದ ನಂತರ ನಮ್ಮ ತಾಯಿ ನನಗೆ ಪಾಲು ಕೊಡುವುದಾಗಿ ಹೇಳಿರುತ್ತಾರೆ. ನಮ್ಮ ಅಣ್ಣ ತಮ್ಮಂದಿರ ಮದುವೆಯಾದ ನಂತರ ನಮ್ಮ ತಾಯಿಗೆ ಪಾಲು ಕೊಡುವಂತೆ ಕೇಳಿದ್ದೆ.

2 ನೇ ಮತ್ತು 3 ನೇ ಪ್ರತಿವಾದಿಯರ ಮದುವೆ ಯಾವ ಇಸವಿಯಲ್ಲಿ ಆಯಿತು ಎಂದು ನನಗೆ ನೆನಪಿಲ್ಲ. ರಮೇಶ್ ರವರ ಮದುವೆ 1994 ರಲ್ಲಿ ಮತ್ತು ರಾಜೇಶ್ ರವರ ಮದುವೆ 1996 ರಲ್ಲಿ ಆಗಿರುತ್ತದೆ ಎಂದರೆ ಇರಬಹುದು. 1996 ರ ನಂತರ ಇಬ್ಬರ ಮದುವೆಯಾದ ನಂತರ ನಾನು ಭಾಗ ಕೇಳಲಿಲ್ಲ. ಹಳೆಯ ಬಾಡಿಗೆದಾರರ ಮೇಲೆ ಟೆನೆನ್ಸಿ ಕೇಸು ಇರುವುದರಿಂದ ಅದು ಮುಗಿದ ನಂತರ ಪಾಲು ಕೊಡುವುದಾಗಿ ಹೇಳಿದ್ದರು. ಹಳೆಯ 4 ಬಾಡಿಗೆದಾರರ ಮೇಲೆ ಕೇಸು ಆಗಿತ್ತು ಅದರ ಬಗ್ಗೆ ವಿವವರವಾಗಿ ನನಗೆ ಗೊತ್ತಿಲ್ಲ.

ನಮ್ಮ ಅಜ್ಜಿ ದಾವಾಸ್ತಿಯ ಬಗ್ಗೆ ನಮ್ಮ ತಾಯಿಯ ಹೆಸರಲ್ಲಿ ವಿಲ್ ಮಾಡಿದ್ದರಿಂದ ಆ ಪ್ರಕಾರ ನಮ್ಮ ತಾಯಿಯೇ ಸಂಪೂರ್ಣ ಆಸ್ತಿಯ ಮಾಲಿಕರು ಎಂದು ಗೊತ್ತಿರುವುದರಿಂದ ನಾನು ಯಾವುದೇ ಪಾಲು ಕೇಲಿರಲಿಲ್ಲಎಂದರೆ ಸುಳ್ಳು. ನಮ್ಮ ಅಜ್ಜಿ ಮುನಿಯಮ್ಮ ನಮ್ಮ ತಾಯಿಯ ಹೆಸರಿನಲ್ಲಿ 13.05.1994 ರಂದು ಮರಣ ಶಾಸನ ಮಾಡಿದ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ಸುಳ್ಳು.

ದಾವಾಸ್ತಿ ಹೊರತು ಪಡಿಸಿ ಧರಂ ರಾಜ್ ಟೆಂಪಲ್ ನಗರತ್ ಪೇಟೆಯಲ್ಲಿ ಇನ್ನೊಂದು ಆಸ್ತಿ 1029 ಇತ್ತು ಎಂದರೆ ನಿಜ. ಸದರಿ ಆಸ್ತಿಯನ್ನು ಅಮ್ಮ ಅಣ್ಣ ಮತ್ತು ತಮ್ಮ ಮಾರಾಟ ಮಾಡಿದ್ದರಿಂದ ಅದನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಅದನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಕೂಡಾ ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ನಿಜ. ಈಗ ನೋಡುತ್ತಿರುವ ದಾಖಲೆ ಸದರಿ ಆಸ್ತಿ ಮಾರಾಟ ಮಾಡಿದ ಶುದ್ದ ಕ್ರಯ ಪತ್ರ ಎಂದರೆ ನಿಜ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ್ದರಿಂದ ನಿಡಿ 1 ಎಂದು ಗುರುತಿಸಲಾಯಿತು.

ನಮ್ಮ ಯಜಮಾನರು ಕಾನೂನು ಪದವಿದಾರರು ಎಂದರೆ ನಿಜ. ನಾನು ನನ್ನ ಎಲ್ಲಾ ವ್ಯವಹಾರವನ್ನು ನಮ್ಮ ಯಜಮಾನರ ಸಲಹೆ ಪಡೆದು ಮಾಡುತ್ತೇನೆ ಎಂದರೆ ಸರಿಯಲ್ಲ. ನಿಡಿ 1 ರ ಖರೀದಿ ಪತ್ರದ ಬಗ್ಗೆ ನಾನು ಯಾವತ್ತು ತಕರಾರು ಮಾಡಿಲ್ಲ ಎಂದರೆ ನಿಜ. ಬನಶಂಕರಿ ಮೊಲನೆ ಹಂತದಲ್ಲಿ 30*40 ಅಳತೆಯ ಒಂದು ಸೈಟು ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ನಿಜ. ಈಗ ನೋಡುತ್ತಿವ ದಾಖಲೆ ಸದರಿ ಸೈಟು ನನ್ನ ಹೆಸರಿನಲ್ಲಿ ಖರೀದಿ ಆದ ಬಗ್ಗೆ ಇರುತ್ತದೆ ಎಂದರೆ ನಿಜ. ಸದರಿ ದಾಖಲೆಯನು ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಡಿ 2 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಕೀಲರ ವಿನಂತಿ ಮೇರೆಗೆ ಮೂಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ದಾಖಲಿಸಿಕೊಳ್ಳಲಾಗಿದೆ.)

ಓ ಹೇ ಕೇ ಸರಿ ಇದೆ.

( ಎಸ್. ಆರ್. ದಿಂಡಲಕೊಪ್ಪ )
15 ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.